# ಪರಿಷ್ಕೃತ ಮಾದರಿ ಪ್ರಶ್ನೆ ಪತ್ರಿಕೆ

**ವಿಷಯ : ದ್ವಿತೀಯ ಭಾಷೆ–ಕನ್ನಡ (ಹೊಸ ಪಠ್ಯಕ್ರಮ)**

**ಸಂಕೇತ ಸಂ: 33K**

**ಅಂಕಗಳು :80** **ಸಮಯ : 2 ಗಂಟೆ 30 ನಿಮಿಷ**

**ಸೂಚನೆಗಳು :** ಪ್ರಶ್ನೆಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.

ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.

ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.

ಪ್ರತಿ ಪ್ರಶ್ನೆಗೂ ಉತ್ತರಕ್ಕಾಗಿ ಮೀಸಲಿಟ್ಟ ಜಾಗದಲ್ಲೇ ಉತ್ತರ ಬರೆಯುವುದು ಕಡ್ಡಾಯ

## ವಿಭಾಗ: ಎ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** **8*1=8**

1. ರಾಹುಲರ ಹೆಸರಿಗೆ ದ್ರಾವಿಡ್ ಎಂಬುದು ಸೇರಿದ್ದು ಹೇಗೆ ?
2. ಕಲಿಕೆಗೆ ಮುಖ್ಯವಾಗಿ ಇರಬೇಕಾದುದು ಯಾವುದು ?
3. ಸಾದಕ ಶಿಷ್ಯರ ಬಗೆಗಿರುವ ರಾಮನ್‌ರ ದೊಡ್ಡಗುಣ ಯಾವುದು ?
4. ಅಂತರಾತ್ಮ ಏನೆಂದು ಚೀರುತ್ತದೆ ?
5. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?
6. ಬಣ್ಣಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು ?
7. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ ?
8. ಬನದ ಗೋಪಾಲ ಯಾರು ?

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **11x2=22**

9. ರಾಹುಲ್ ದ್ರಾವಿಡರ ಆಟದ ವೈಶಿಷ್ಟ್ಯವೇನು ?
10. ‘ ಕಾದುನಡೆ ‘ ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು ?
11. ಅಜ್ಜನ ಆದರ್ಶಗುಣ ಯಾವುದಾಗಿತ್ತು ?
12. ರಾಮನ್‌ರು ತಮ್ಮ ಶಿಷ್ಯರನ್ನು ಹೇಗೆ ಪ್ರೋತ್ಸಾಹಿಸುತ್ತಿದ್ದರು ?
13. “ಇನ್ನೂ ಹೊಡೀರಿ ಸರ್” ಎಂದು ಪೊಲೀಸ್ ಅಧಿಕಾರಿ ಹೇಳಿದುದೇಕೆ ?
14. ಕಂದಯ್ಯ ಅತ್ತರೆ ಆಗುವ ಅಚ್ಚರಿಗಳೇನು ?
15. ಕವಯಿತ್ರಿಗೆ ತನ್ನ ಇರುವಿಕೆಯ ಅರಿವಾಗುವುದು ಯಾವಾಗ ?
16. ಗೋಪಾಲನ ತಾಯಿಯು ಬೆಳಗ್ಗೆ ಬೇಗನೆ ಏಳಬೇಕೆಂದು ಬಯಸುವುದೇಕೆ ?
17. ದೀಪದೆದುರಿಗೆ ತಿಮಿರ ಸರಿಯುವಂತೆ ಎಂಬುದರ ಅರ್ಥವನ್ನು ವಿವರಿಸಿ
18. ಹೆಣ್ಣೊಬ್ಬಳು ಲೇಖಕರಿಗೆ ‘ನನ್ನ ಪಾಲಿನ ದೇವರೆಂದು’ ನಮಿಸಲು ಕಾರಣವೇನು ?
19. ಸಾವಿತ್ರಿಯು ತೀರಾ ಮುಗ್ದೆ ಹೇಗೆ ?

**ಈ ಕೆಳಗಿನ ಹೇಳಿಕೆಗಳ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ :** **2x3=6**

20. “ಕುರುಡರಾಗಿದ್ದರೂ ಕಣ್ಣಿದ್ದವರ ಕಣ್ಣು ತೆರೆಯಿಸಿದ ಮಹಾಶಕ್ತಿ”.
21. “ನೀರಕಂಡಲ್ಲಿ ಮುಳುಗುವರಯ್ಯ”.

**ಈ ಕೆಳಗಿನ ಸಾಹಿತಿಗಳ ಸ್ಥಳ,ಕಾಲ ಮತ್ತು ಒಂದು ಕೃತಿಯ ಹೆಸರನ್ನು ವಾಕ್ಯಗಳಲ್ಲಿ ಬರೆಯಿರಿ : 2x3=6**

22. ಅ.ರಾ.ಮಿತ್ರ
23. ಸು.ರಂ.ಎಕ್ಕುಂಡಿ

**ಈ ಕೇಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1x3=3**

24. ಕೊರಡ ಕೊನರಿಸಿ________________________________

________________________ ಚಿಲಿಪಿಲಿಯ ಕರವಕೆ ಮತ್ತೇರಿದೆ. (ನಾಲ್ಕು ಸಾಲು)

**ಅಥವಾ**

ಯುಗದ ಹಿಂದಿನ________________________________

________________________ತುಂಬ ಸವಿಚೈತ್ರವು (ನಾಲ್ಕು ಸಾಲು)

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2x4=8**

25. ಪಶ್ಚಿಮ ಘಟ್ಟಗಳ ಪತನಕ್ಕೆ ಕಾರಣಗಳನ್ನು ನಿಮ್ಮ ಮಾತುಗಳಲ್ಲಿ ತಿಳಿಸಿ.

**ಅಥವಾ**

ಸಹ್ಯಾದ್ರಿ ಸಹನೆ ಕಳೆದುಕೊಳ್ಳಲು ಕಾರಣ ಮತ್ತು ಅದರ ಪರಿಣಾಮ ಏನು ಎಂಬುದನ್ನು ವಿವರಿಸಿ.

26. 'ಗುರಿ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

**ಅಥವಾ**

ಜೀವನದ ಪರಮಗುರಿಯನ್ನು ಕುರಿತು 'ಗುರಿ' ಪದ್ಯದಲ್ಲಿ ಗೋಪಾಲ ಕೃಷ್ಣ ಅಡಿಗರು ನೀಡಿರುವ ಸಂದೇಶವನ್ನು ಕುರಿತು ಬರೆಯಿರಿ.

**ವಿಭಾಗ-ಬಿ**

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದುದನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

27. 'ಪ್ರಾಮಾಣಿಕ' ಪದದ ವಿರುದ್ಧಾರ್ಥಕ ರೂಪ : 12x1=12

ಎ)ಪ್ರಾರಂಭಿಕ ಬಿ)ಅಪ್ರಮಾಣಿಕ

ಸಿ) ಪ್ರಮಾಣಿಕ ಡಿ)ಪ್ರಾಪಂಚಿಕ

28. 'ಅಜ್ಜ' ಪದದ ತತ್ಸಮ ರೂಪ :

ಎ) ಕಜ್ಜ ಬಿ)ಆಜ್ಯ

ಸಿ) ಆರ್ಯ ಡಿ)ಅಬ್ಜ

29. ಸವರ್ಣದೀರ್ಘ ಸಂಧಿಗೆ ಈ ಪದವು ಉದಾಹರಣೆಯಾಗಿದೆ :

ಎ) ಪ್ರತ್ಯುತರ ಬಿ) ಪರಹಿತಾಕಾಂಕ್ಷಿ

ಸಿ)ಊರೂರು ಡಿ) ಚಂದ್ರೋದಯ

30. 'ಇತ್ತಂಡ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

ಎ) ತತ್ಪುರುಷ ಬಿ)ದ್ವಿಗು

ಸಿ)ದ್ವಂದ್ವ ಡಿ)ಕ್ರಿಯಾ

31. 'ಕೇಳಿದನು' ಎಂಬ ಕ್ರಿಯಾ ಪದಲ್ಲಿರುವ ಧಾತು :

ಎ)ಕೇಳಿ ಬಿ)ಕೇಳಿದ

ಸಿ)ಕೇಳು ಡಿ)ಕೇಳಲ್

32. 'ಭಾಜನ' ಪದದ ಅರ್ಥ :

ಎ)ಭಜನೆ ಬಿ)ಪಾತ್ರ

ಸಿ)ಪ್ರಾರ್ಥನೆ ಡಿ)ಭಂಜನೆ

33. 'ರಾಜನಿಗೆ' ಈ ನಾಮಪದದಲ್ಲಿರುವ ವಿಭಕ್ತಿ :

ಎ)ಷಷ್ಠಿ ಬಿ)ಸಪ್ತಮಿ

ಸಿ)ಚತುರ್ಥಿ ಡಿ)ಪಂಚಮಿ

34. "ರವಿಕರಕೆ ಕರಗುವಿಬ್ಬನಿವೊಲ್" ವಾಕ್ಯವು ಈ ಅಲಂಕಾರಕ್ಕೆ ಉದಾಹರಣೆ ಆತದೆ :

ಎ)ಉಪಮ ಬಿ)ರೂಪಕ

ಸಿ)ದೀಪಕ ಡಿ)ಉತ್ಪ್ರೇಕ್ಷೆ

35. 'ಶಾರದೆ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ :

ಎ)ನಾಲ್ಕು ಬಿ)ಮೂರು

ಸಿ)ಆರು ಡಿ)ಐದು

36. 'ಭಾನು' ಪದದ ಸಮಾನಾರ್ಥಕ ಪದ :

ಎ)ಆಕಾಶ ಬಿ)ಮುಗಿಲು

ಸಿ)ಸೂರ್ಯ ಡಿ)ಮೋಡ

37. ನೆಲದಮ್ಮ ನವವಧುವೆ ಆದಳಿಂತು ! ಈ ವಾಕ್ಯದಲ್ಲಿ ಬಳಸಿರುವ ಲೇಖನ ಚಿಹ್ನೆ

ಎ)ಪೂರ್ಣವಿರಾಮ ಬಿ)ಪ್ರಶ್ನಾರ್ಥಕ

ಸಿ)ಉದ್ಧರಣ ಡಿ)ಆಶ್ಚರ್ಯಸೂಚಕ

38. 'ಮೈಯೆಲ್ಲ ಕಿವಿಯಾಗು' ಎಂಬ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :

ಎ)ಅನುಕರಣಾವ್ಯಯ ಬಿ)ನುಡಿಗಟ್ಟು

ಸಿ)ದ್ವಿರುಕ್ತಿ ಡಿ)ಜೋಡುನುಡಿ

## ವಿಭಾಗ–ಸಿ

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:**

ಈ ಭೂಮಿಯು ಒಂದು ವೈವಿಧ್ಯಪೂರ್ಣ ಸೃಷ್ಟಿ. ಈ ಸೃಷ್ಟಿಯು ಯಾವುದೂ ಒಂದು ಶಕ್ತಿಗೆ ಒಳಗಾಗಿದೆ.ಇದನ್ನೆ ನಾವು ದೈವೀ ಶಕ್ತಿ ಎಂದು ನಂಬಿ ಮೌಢ್ಯಕ್ಕೆ ಒಳಗಾಗಿದ್ದೇವೆ. ಈ ಮೌಢ್ಯದ ಸಂಕೇತಗಳೆ ಜಾತಿ,ಜನಾಂಗ,ಧರ್ಮಗಳು. ಈ ಸಂಕೇತಗಳಿಗೆ ಸಿಲುಕಿ ಸಾಮಾನ್ಯ ಮಾನವ ಅವನತಿಯ ಕಡೆಗೆ ಸಾಗಿದ್ದಾನೆ. ಇದನ್ನೆ ತಮ್ಮ ಅವಕಾಶ ಮಾಡಿಕೊಂಡ ಗೋಮುಖವ್ಯಾಘ್ರಗಳು ಇನ್ನಷ್ಟು ಇವರನ್ನು ಪ್ರಪಾತಕ್ಕೆ ನೂಕುತ್ತಿದ್ದಾರೆ. ಆದರೆ 'ಶಿಕ್ಷಣ' ಎಂಬ ದಿವ್ಯಮಂತ್ರವನ್ನು ಪಠಿಸಿ; ಧಾರಣೆ ಮಾಡಿ ಅಂಬೇಡ್ಕರ್ ಅವರಂತಹ ಪುರುಷಸಿಂಹವಾಗಿ ಹೊರ ಬಂದು ತಮ್ಮ ಜೀವನದ ದಾರಿಯನ್ನು ಕಂಡು ಕೊಂಡಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಮತ,ಪಂಥಗಳು ಗೌಣವಾಗಿದ್ದು ವ್ಯಕ್ತಿಯು ತನ್ನ ಪರಿಶ್ರಮದಿಂದ ಗಳಿಸಿಕೊಂಡಿರುವ/ಗಳಿಸಿಕೊಳ್ಳುವ ಜ್ಞಾನಾರ್ಜನೆಯ ಕೌಶಲವೇ ಮುಖ್ಯವಾಗಿದೆ.

**ಪ್ರಶ್ನೆಗಳು :** **4x1=4**

39. ವೈವಿಧ್ಯಪೂರ್ಣ ಸೃಷ್ಟಿ ಯಾವುದು ?

40. ಮೌಢ್ಯದ ಸಂಕೇತಗಳಾವುವು ?

41. ಪುರುಷ ಸಿಂಹ ಯಾರು ?

42. ಈಗ ನಾವು ಗಳಿಸಿಕೊಳ್ಳಬೇಕಾಗಿರುವ ಅಂಶ ಯಾವುದು ?

*43.* **ಈ ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಂಡು ಸೂಕ್ತ ನಿದರ್ಶನದೊಂದಿಗೆ ಬರೆಯಿರಿ.**

*ಕಷ್ಟಪಟ್ಟರೆ ಫಲವುಂಟು. 1x3=3

*ಹಾಸಿಗೆ ಇದ್ದಷ್ಟು ಕಾಲು ಚಾಚು.

*ದುಡ್ಡೇ ದೊಡ್ಡಪ್ಪ ; ವಿದ್ಯೆ ಅವರಪ್ಪ.

*44.* **ನಿಮ್ಮನ್ನು ಬೆಂಗಳೂರಿನ ಶಿವನಗರದ ಸರ್ಕಾರಿ ಪ್ರೌಢಶಾಲೆಯ ಗೋಪಾಲ ಎಂದು ಭಾವಿಸಿಕೊಂಡು, ಮೈಸೂರಿನಲ್ಲಿ ಓದುತ್ತಿರುವ ಗೆಳೆಯನಾದ ಗೋವಿಂದನಿಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರೋತ್ಸವದ ಕಾರ್ಯಕ್ರಮವನ್ನು ವಿವರಿಸಿ ಒಂದು ಪತ್ರ ಬರೆಯಿರಿ.**

**ಅಥವಾ**

**ನಿಮ್ಮನ್ನು ಕೋಲಾರದ ರೈಲ್ವೇ ಬಡಾವಣೆಯ ಸರ್ಕಾರಿ ಶಾಲೆಯ ಸಂದೀಪ ಎಂದು ಭಾವಿಸಿಕೊಂಡು ವ್ಯಾಸಂಗ ದೃಢೀಕರಣ ಪತ್ರ ಕೊಡುವಂತೆ ಕೋರಿ ಶಾಲಾ ಮುಖ್ಯ ಶಿಕ್ಷಕರಿಗೆ ಮನವಿ ಪತ್ರ ಬರೆಯಿರಿ. 1x4=4**

**45. ಈ ಕೆಳಗಿನ ಯಾವುದಾದರೊಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧ ಬರೆಯಿರಿ.**

**1x4=4**

*ಶಾಲೆಗಳಲ್ಲಿ ಮಕ್ಕಳ ಸುರಕ್ಷತೆ.

*ಶಿಕ್ಷಣದಲ್ಲಿ ಯೋಗದ ಪಾತ್ರ.

*ರಾಷ್ಟ್ರೀಯ ಹಬ್ಬಗಳು.